ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.

ಸಂಖ್ಯೆ: ನಿ(ಪ್ರಾ.ಶಿ)4/2019-20 ದಿನಾಂಕ: 19-07-2019

**ತಿದ್ದುಪಡಿ ಜ್ಞಾಪನ**

**ವಿಷಯ: ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆಗಳಿಗೆ ಸಂಬಂಧಿಸಿದಂತೆ ವಿನಾಯಿತಿ / ಆದ್ಯತಾ ಪ್ರಕರಣಗಳಡಿ ಸ್ವೀಕೃತವಾಗಿರುವ ಅರ್ಜಿಗಳ ಹಾಗೂ ಆಕ್ಷೇಪಣೆಗಳನ್ನು ಪರಿಶೀಲನೆ ಹಾಗೂ ವಿಲೇವಾರಿ ಮಾಡಲು ಅನುಸರಿಸಬೇಕಾದ ಕಾರ್ಯವಿಧಾನದಲ್ಲಿ ಸಂಘದ ಚುನಾಯಿತ ಪದಾಧಿಕಾರಿಗಳ ವಿವರಗಳನ್ನು ರಾಜ್ಯ ಸಂಘದ ಅಧ್ಯಕ್ಷರು ದೃಢೀಕರಿಸಿ ನೀಡಬೇಕಾಗಿರುವ ಬಗ್ಗೆ**

**ಉಲ್ಲೇಖ : 1) ಇದೇ ವಿಷಯದಲ್ಲಿ ದಿನಾಂಕ 17/07/2019ರಂದು ಹೊರಡಿಸಲಾಗಿದ್ದ ಜ್ಞಾಪನ**
**2) ವರ್ಗಾವಣಾ ನಿಯಮಗಳು 2017**

- - -

ವಿಷಯದನ್ವಯ ಹೊರಡಿಸಲಾಗಿದ್ದ ಜ್ಞಾಪನದಲ್ಲಿ ವರ್ಗಾವಣೆ / ವಿನಾಯಿತಿ / ಆದ್ಯತಾ ಪ್ರಕರಣಗಳ ಕುರಿತಾದ ಆಕ್ಷೇಪಣೆಗಳನ್ನು ಇತ್ಯರ್ಥಪಡಿಸುವಾಗ ಪ್ರಸ್ತುತ ಅವಧಿಗೆ ಚುನಾಯಿತ ಪದಾಧಿಕಾರಿಯಾಗಿರುವ ಬಗ್ಗೆ ಸಂಘದ ಅಧ್ಯಕ್ಷರ ದೃಢೀಕರಣ ಎಂದರೆ "ತಾಲ್ಲೂಕು ಮಟ್ಟದ ಪದಾಧಿಕಾರಿಯಾಗಿದ್ದಲ್ಲಿ ತಾಲ್ಲೂಕು ಅಧ್ಯಕ್ಷರು / ಜಿಲ್ಲಾ ಮಟ್ಟದ ಪದಾಧಿಕಾರಿಯಾಗಿದ್ದಲ್ಲಿ ಜಿಲ್ಲಾ ಅಧ್ಯಕ್ಷರು / ರಾಜ್ಯ ಮಟ್ಟದ ಪದಾಧಿಕಾರಿಯಾಗಿದ್ದಲ್ಲಿ ರಾಜ್ಯ ಅಧ್ಯಕ್ಷರ ದೃಢೀಕರಣ"ಗಳನ್ನು ಪಡೆದು ಪರಿಶೀಲಿಸಲು ತಿಳಿಸಲಾಗಿತ್ತು. ವರ್ಗಾವಣಾ ನಿಯಮಗಳಲ್ಲಿ ಕೇಂದ್ರ ಸಂಘದಿಂದ ಪಟ್ಟಿ ಸಲ್ಲಿಕೆಯಾಗಬೇಕು ಎಂಬುದಾಗಿ ಇರುವುದರಿಂದ "ಚುನಾಯಿತ ಪದಾಧಿಕಾರಿಯಾಗಿರುವ ಬಗ್ಗೆ ಸಂಘದ ಅಧ್ಯಕ್ಷರ ದೃಢೀಕರಣ ಎಂದರೆ "ಸಂಘದ ರಾಜ್ಯ ಅಧ್ಯಕ್ಷರ ದೃಢೀಕರಣ" ಎಂಬುದಾಗಿ ಓದಿಕೊಳ್ಳತಕ್ಕದ್ದು" ಮತ್ತು ಈಗಾಗಲೇ ಸಂಘದ ರಾಜ್ಯ ಅಧ್ಯಕ್ಷರು ನೀಡಿರುವ ಪಟ್ಟಿಗಳನ್ನು ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು ಪರಿಶೀಲಿಸಿಕೊಂಡು ವರ್ಗಾವಣಾ ತಂತ್ರಾಂಶದಲ್ಲಿ ಅಗತ್ಯ ಕ್ರಮಕೈಗೊಳ್ಳತಕ್ಕದ್ದು ಎಂಬುದನ್ನು ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ,
ರಾಜ್ಯದ ಎಲ್ಲಾ ಉಪನಿರ್ದೇಶಕರಿಗೆ
ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಯವರಿಗೆ (ಉಪನಿರ್ದೇಶಕರ ಮುಖಾಂತರವಾಗಿ)

ಪ್ರತಿ :

1) ಅಪರ ಆಯುಕ್ತರು , ಧಾರವಾಡ / ಗುಲ್ಬರ್ಗಾ , ಮಾಹಿತಿಗಾಗಿ
2) ಸಹನಿರ್ದೇಶಕರು, ಬೆಂಗಳೂರು / ಮೈಸೂರು ವಿಭಾಗ, ಮಾಹಿತಿ ಕ್ರಮಕ್ಕಾಗಿ
3) ಹಿರಿಯ ಸಹಾಯಕ ನಿರ್ದೇಶಕರು , ಇ - ಆಡಳಿತ ವಿಭಾಗ , ಆಯುಕ್ತರ ಕಛೇರಿ, ಬೆಂಗಳೂರು - ಕ್ರಮಕ್ಕಾಗಿ

Scanned by CamScanner